ಆದರೂ ಕಷ್ಟಪಟ್ಟು ಓದಿದೆ. ಇಂಗ್ಲಿಷ್ ಸಾಹಿತ್ಯದಲ್ಲಿ ನಾನು ಪದವಿ ಪಡೆದಿದ್ದೇನೆ.

**◆ ನಿಮ್ಮ ತಂದೆ-ತಾಯಿಗಳ ವೃತ್ತಿ ಏನಾಗಿತ್ತು? ನೀವೀಗ ಏನು ಕೆಲಸ ಮಾಡುತ್ತಿದ್ದೀರಿ?**

ಅಪ್ಪ ಕಟ್ಟಡ ಕಾರ್ಮಿಕ. ಅಮ್ಮ ಮನೆವಾರ್ತೆ ನೋಡಿಕೊಳ್ಳುತ್ತಾಳೆ. ಬರವಣಿಗೆ ಮತ್ತು ಚಿತ್ರ ಬಿಡಿಸೋದಕ್ಕೆ ಇಬ್ಬರೂ ನನಗೆ ಬಹಳ ಪ್ರೋತ್ಸಾಹ ನೀಡಿದ್ದಾರೆ. ಮೊದಲಿಗೆ ನಾನು ಇಂಗ್ಲಿಷ್ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ. ನಂತರ ಸ್ಥಳೀಯ ಸಂಸ್ಥೆಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡೆ. ಈಗ ನಾನು ಯುದ್ಧದಲ್ಲಿ ತಮ್ಮ ಕುಟುಂಬಗಳನ್ನು ಕಳೆದುಕೊಂಡ ಮಹಿಳೆಯರಿಗೆ ಮಾನಸಿಕ ಸ್ಥೈರ್ಯ ನೀಡುವ ಸಮಾಲೋಚಕಿ ಆಗಿದ್ದೇನೆ. ಕವಿತೆಯ ಜೊತೆಗೆ ನಾನು ಸಣ್ಣ ಕಥೆಗಳನ್ನೂ ಬರೆಯುತ್ತೇನೆ.

**◆ ಊಳಿಗಮಾನ್ಯ ಮೌಲ್ಯಗಳಿರುವ ಏಷ್ಯಾ, ಆಫ್ರಿಕಾ ಹಾಗೂ ಅರಬ್ ದೇಶಗಳಲ್ಲಿ ಪುರುಷ ಪ್ರಧಾನ ಸಮಾಜ ಅತ್ಯಂತ ಪ್ರಭಾವಶಾಲಿ. ಹಾಗೆ ನೋಡಿದರೆ ಅರಬ್‌ನಲ್ಲಿ ಬಹುಪತ್ನಿತ್ವ ಈಗಲೂ ಚಾಲ್ತಿಯಲ್ಲಿದೆ. ಆಧುನಿಕ ಕಾಲದ ಶಿಕ್ಷಿತ ಮಹಿಳೆಯಾಗಿ ಹಾಗೂ ಸಂವೇದನಾಶೀಲ ಕವಯಿತ್ರಿಯಾಗಿ ನಿಮ್ಮ ಪ್ರತಿಕ್ರಿಯೆ ಏನು?**

ಮಹಿಳೆಯರು ತಮ್ಮ ಹಕ್ಕುಗಳನ್ನು ತಾವೇ ಚಲಾಯಿಸಲು ಆರಂಭಿಸಿದ್ದಾರೆ. ಅವರು ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭಾಗವಹಿಸುತ್ತಿದ್ದಾರೆ. ರಾಜಕೀಯ ಧುರೀಣರು, ಕವಿ, ಕಲಾವಿದರು ಮತ್ತು ಸರ್ಕಾರಿ ಕ್ಷೇತ್ರದಲ್ಲಿ ಉನ್ನತಹಂತದಲ್ಲಿ ಕೆಲಸ ಮಾಡುತ್ತಿರುವ ಬಹಳಷ್ಟು ಪ್ರಗತಿಪರ ಮಹಿಳೆಯರ ಉದಾಹರಣೆಗಳು ನಿಮಗೆ ಸಿಗುತ್ತವೆ. ನೀವು ಹೇಳಿದ ಹಾಗೆ ಕೆಲವು ಅರಬ್ ರಾಷ್ಟ್ರಗಳಲ್ಲಿ ಈ ಅನಿಷ್ಟ ಪದ್ಧತಿ ಇನ್ನೂ ಉಳಿದುಕೊಂಡಿದೆ. ಆದರೆ, ಅದರ ಪ್ರಮಾಣ ತೀರಾ ಕಡಿಮೆ. ಹೌದು, ಕೆಲವರು 'ಇದು ಧರ್ಮದ ಅಂಗ' ಎಂದು ಶಾಸ್ತ್ರದ ನೆರವು ಪಡೆದು ನುಣುಚಿಕೊಳ್ಳುತ್ತಾರೆ. ಇಂಥವರು ಷರಿಯತ್ ಕಾನೂನನ್ನು ತಮಗೆ ಹೇಗೆ ಬೇಕೋ ಹಾಗೆ ವ್ಯಾಖ್ಯಾನಿಸಿಕೊಳ್ಳುತ್ತಾರೆ. ನಾವು ಗಮನಿಸಬೇಕಾದುದು– ಟ್ಯುನೀಶಿಯಾ 1956ರಲ್ಲಿ ಬಹುಪತ್ನಿತ್ವವನ್ನು ನಿಷೇಧಿಸಿತು. ಮೊರಾಕ್ಕೊದಲ್ಲಿ ಮಹಿಳೆಯರ ಒತ್ತಾಯದಿಂದ 2004ರಲ್ಲಿ ಕೌಟುಂಬಿಕ ಕಾಯಿದೆ ಬದಲಾವಣೆ ಆಯಿತು. ಈಜಿಪ್ಟ್‌ನಲ್ಲಿ ಕ್ರಾಂತಿಯ ಸಮಯದಲ್ಲಿ ಸಾವಿರಾರು ಮಹಿಳೆಯರು ಬೀದಿಗಿಳಿದು ತಮ್ಮ ಹಕ್ಕುಗಳಿಗಾಗಿ ಹೋರಾಡಿದರು. ಸೌದಿ ಅರೇಬಿಯಾದಲ್ಲಿ ಮಹಿಳೆಯರು ವರ್ಷಗಳ ಕಾಲ ಹೋರಾಟ ಮಾಡಿ 2018ರಲ್ಲಿ ವಾಹನ ಚಲಾಯಿಸುವ ಹಕ್ಕು ಪಡೆದರು. ಈ ಎಲ್ಲಾ ಘಟನೆಗಳು ಬದಲಾವಣೆ ಸಾಧ್ಯವೆಂಬುದಕ್ಕೆ ಸಾಕ್ಷಿ. ಈ ಪ್ರಶ್ನೆ ಅಮೆರಿಕ ಕೇಂದ್ರಿತ ಪಶ್ಚಿಮದ ಕಾಮಾಲೆ ದೃಷ್ಟಿಕೋನವನ್ನು ಸೂಕ್ಷ್ಮವಾಗಿ ಪ್ರತಿಪಾದಿಸುತ್ತಿದೆ. ಐರ್ಲೆಂಡ್‌ನಲ್ಲಿ ಗರ್ಭಪಾತ ಕಾನೂನು ಬದ್ಧವಾಗಲು ಶತಮಾನಗಳು ಕಾಯಬೇಕಾಯ್ತು. ಎಷ್ಟೇ ಮುಂದುವರಿದರೂ ಇಲ್ಲಿಯತನಕ ಒಬ್ಬ ಮಹಿಳೆ ಅಮೆರಿಕದಲ್ಲಿ ಅಧ್ಯಕ್ಷೆ ಆಗಲು ಸಾಧ್ಯವಾಗಿಲ್ಲ.

**ಇನಾಮ್ ಅವರ ಸಂದರ್ಶನ**

ನನಗನ್ನಿಸುವ ಹಾಗೆ ಮಹಿಳೆಯರು ಮೌನವಾಗಿಲ್ಲ. ಯುದ್ಧದಲ್ಲಿ ತಮ್ಮ ಮಕ್ಕಳನ್ನು ಕಳೆದುಕೊಂಡ ಅನೇಕ ಹೆಣ್ಣುಮಕ್ಕಳು ನನ್ನ ಬಳಿಗೆ ಬರುತ್ತಾರೆ. ನನ್ನಿಂದಾದಷ್ಟು ಅವರಿಗೆ ಮಾನಸಿಕ ಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದ್ದೇನೆ. ಕೆಲವರು ತಮ್ಮ ನೋವನ್ನು ಕಣ್ಣೀರಿನ ಮೂಲಕ ಹೊರಹಾಕಿದರೆ, ಇನ್ನೂ ಕೆಲವರು ನಿಶ್ಶಬ್ದವಾಗಿ ಮೌನದಲ್ಲೇ ಎಲ್ಲವನ್ನೂ ವ್ಯಕ್ತಪಡಿಸುತ್ತಾರೆ. ಆ ಸಂದರ್ಭಗಳಲ್ಲಿ, ಮಹಿಳೆಯರು ಎಷ್ಟೇ ನೋವಿನಲ್ಲಿದ್ದರೂ ಬದುಕನ್ನು ಮರು ಕಟ್ಟಿಕೊಳ್ಳುವ ಶಕ್ತಿ ಹಾಗೂ ಸಂಕಲ್ಪ ಅವರಿಗಿದೆ ಅಂತ ಬಹಳ ಸಲ ನನಗನಿಸಿದೆ.

ನಾನೊಬ್ಬ ಕವಯಿತ್ರಿಯಾಗಿ ನನ್ನ ಬರಹದ ಮೂಲಕ ಆ ಮಹಿಳೆಯರ ಮೂಕಧ್ವನಿಗೆ ಮಾತು ಕೊಡಲು ಪ್ರಯತ್ನಿಸುತ್ತೇನೆ. ನನ್ನ ನಂಬಿಕೆ ಏನೆಂದರೆ ಹಕ್ಕುಗಳನ್ನು ಕೇವಲ ಕಾನೂನು ಕೊಡೋದಿಲ್ಲ, ಅದನ್ನು ಹೆಣ್ಣುಮಕ್ಕಳು ತಮ್ಮ ಧೈರ್ಯ, ಸಹನೆ ಮತ್ತು ಒಟ್ಟುಗೂಡುವಿಕೆಯ